ಕಣ್ಣೂರು ಗ್ರಾಮಕ್ಕೆ ಸೇರಿಸಿ ಪ್ರತ್ಯೇಕ ಗ್ರಾಮ ಪಂಚಾಯಿತಿ ಮಾಡುವ ಒಂದು ವ್ಯವಸ್ಥೆ ಕೂಡ ನಡೆಯುತ್ತಿರುವುದರಿಂದ ನಾನು ರಾಜ್ಯಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ಇಷ್ಟು ದೊಡ್ಡ ಜನಸಂಖ್ಯೆ ಇರುವ ಗ್ರಾಮವನ್ನು ಮತ್ತು ತೀವ್ರತರ ಮೂಲಭೂತ ಸೌಲಭ್ಯದ ತೊಂದರೆ ಇರುವುದರಿಂದ ಇದನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಗೊಳಿಸುವಲ್ಲಿ ರಾಜ್ಯ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಚುನಾವಣೆಗೋಸ್ಕರ ಇದನ್ನು ಪ್ರತ್ಯೇಕ ಗ್ರಾಮಪಂಚಾಯಿತಿ ಮಾಡಬೇಡಿ. ದಯವಿಟ್ಟು ಇದನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಿಕೊಳ್ಳಬೇಕೆಂದು ಹೇಳುತ್ತೇವೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕೆಲವು ಕಾನೂನಿನ ಅಂಶಗಳಿವೆ. ಒಂದು ಕಡೆ ಇದನ್ನು ಮಹಾನಗರ ಪಾಲಿಕೆಗೆ ಸೇರ್ಪಡೆ ಮಾಡಬೇಕೆಂದು. ಇನ್ನೊಂದು ಕಡೆ ಅವರೇ ಹೇಳುತ್ತಾರೆ ಗ್ರಾಮ ಪಂಚಾಯಿತಿಗೆ ಈಗಾಗಲೇ ಅದನ್ನು ಪರಿವರ್ತನೆ ಮಾಡಿದ್ದಾರೆ ಎಂದು. ಬಹುಶಃ ಯಾವ ರೀತಿ ಈ ಒಂದು ಪರಿಸ್ಥಿತಿಯನ್ನು ನಿಭಾಯಿಸಬೇಕು ಎಂದು ಹೇಳುವಲ್ಲಿ ಪಂಚಾಯಿತಿ ಮಂತ್ರಿಗಳ ಜೊತೆಯಲ್ಲೂ ಮತ್ತು ಮಹಾನಗರ ಪಾಲಿಕೆಗೆ ಸಂಬಂಧಪಟ್ಟವರ ಜೊತೆಯಲ್ಲಿ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳೋಣ. ಕಡೆಗೆ ಬೇಕಾಗಿರುವುದು ನೀರಿನ ವ್ಯವಸ್ಥೆ ನೀರಿನ ವ್ಯವಸ್ಥೆಯನ್ನು ಮಾಡೋಣ.

ಋ) ಚಿಕ್ಕಮಗಳೂರಿನ ಬೀರೂರು, ಕಡೂರು ಮತ್ತು ಹಾಸನ ಜಿಲ್ಲೆಯ ಗೌಡ ಜನಾಂಗ ಕುರಿತು.

ಶ್ರೀ ಎಂ.ವೀರಪ್ಪಮೊಯಿಲಿ (ಕಾರ್ಕಳ): ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರಿನ ಬೀರೂರು ಕಡೂರು ಕಡೆ ಮತ್ತು ಹಾಸನ ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ ಕೂಡ ಇದೆ. ಕೆಲವು ಗೌಡ ಜನಾಂಗ ಅದು ಪರಿಶಿಷ್ಟ ಪಂಗಡಕ್ಕಿಂತಲೂ ಬಹಳ ಕಡಿಮೆ ಇದ್ದಾರೆ. ಅವರು ಇರತಕ್ಕ ಜಾಗಕ್ಕೆಲ್ಲಾ ನಾನು ಹೋಗಿದ್ದೇನೆ.

ಅಧ್ಯಕ್ಷರು: ಅವರು ಮಾತನಾಡುವುದು ತೆಲುಗಾ?

ಶ್ರೀ ಎಂ.ವೀರಪ್ಪಮೊಯಿಲಿ: ಅವರು ತೆಲುಗು ಮಾತನಾಡುತ್ತಾರೆ. ಆದರೆ ಅವರು ಅಲ್ಲೇ ಸೆಟ್ಲ್ ಆದವರು. ಅಲ್ಲೇ ಹುಟ್ಟಿದವರು. ಬಹಳ ಅತ್ಯಂತ ಮೋಸ್ಟ್ ಬ್ಯಾಕ್‌ವರ್ಡ್ ಕಮ್ಯುನಿಟಿ. ಈಗ ಏನಾಗಿದೆ ಎಂದರೆ ಪ್ರೊಫೆಶನಲ್‌ಕಾಲೇಜು ಸೇರಬೇಕಾದರೆ ಸರ್ಟಿಫಿಕೇಟ್ ಸಿಗುತ್ತಿಲ್ಲ. ಅದಕ್ಕೆ ತಕ್ಷಣ ತಾತ್ಕಾಲಿಕವಾಗಿಯಾದರೂ ಕೂಡ ತಾವು ಅವರಿಗೆ ಕ್ಯಾಸ್ಟ್ ಸರ್ಟಿಫಿಕೇಟನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖೇನ ಅವರಲ್ಲಿ ಕೇಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಕ್ಯಾಸ್ಟ್ ಸರ್ಟಿಫಿಕೇಟನ್ನು ಕೊಡಬೇಕೆಂದು ನಾನು ಈಗಾಗಲೇ ಭರವಸೆ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವರು ಮನವಿಯನ್ನು ಸಲ್ಲಿಸಿ ನಮ್ಮನ್ನು ಹಿಂದುಳಿದ ವರ್ಗಕ್ಕೆ ಸೇರಿಸಬೇಕೆಂದು, ಹಿಂದುಳಿದ ಆಯೋಗ ರಚನೆಯಾಗಿದೆ. ಹಿಂದುಳಿದ ಆಯೋಗ ರಚನೆಯಾದ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ ಹಿಂದುಳಿದ ಆಯೋಗದವರೇ ಆ ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು: ನಿಮ್ಮ ನಾರ್ಮ್ಸ್ ಏನು ಇರುತ್ತೆ. ಆ ನಾರ್ಮ್ಸ್‌ಗೆ ಒಳಪಡುತ್ತಾರೊ ಇಲ್ಲವೋ ಎಂದು ನಿಮ್ಮ ಡಿ.ಸಿ.ಯವರಿಗೆ ಕಳುಹಿಸಿ. ಇಮ್ಮಿಡಿಯೇಟ್ ಆಗಿ ಒಂದು ರಿಪೋರ್ಟ್ ತರಿಸಿಕೊಂಡು ಟೆಂಪೊರರಿ ರಿಲೀಫ್ ಕೊಡಿ. ನೀವು ಪರ್ಮನೆಂಟ್ ಆಗಿ ಅವರನ್ನು ತರತಕ್ಕಂಥದ್ದು ನಿಧಾನಕ್ಕೆ ಮಾಡಿ. ಟೆಂಪೊರರಿ ರಿಲೀಫ್ ಕೊಡಿ. ಅಕಾಡೆಮಿಕ್ ಎಜುಕೇಷನ್‌ಗೆಲ್ಲಾ ತೊಂದರೆಯಾಗುತ್ತೆ.

ಶ್ರೀ ಎಂ.ವೀರಪ್ಪಮೊಯಿಲಿ: ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಕೂಡ ಇದೆ. ಅವರಲ್ಲೇ ಅದನ್ನು ಮಾಡಬಹುದು. ಮಾಡಬಾರದೆಂದು ಹೇಳಿ ಏನು ಇಲ್ಲ.

SRI M.C.NANAIAH: unless they come under the purview of the backward lists ಅವರು ಮುಖ್ಯ ಮಂತ್ರಿಯಾಗಿದ್ದರು, ಈಗ ಯೋಚನೆ ಮಾಡೋಣ.

ಶ್ರೀ ಎಂ.ವೀರಪ್ಪಮೊಯಿಲಿ: ಇಂಥದ್ದೇ ಕೇಸ್ ಬಂದಾಗ it was immediately settled. ಆದರೆ ಇದು ಹಾಗೆಯೇ ಉಳಿದುಕೊಂಡಿತು. ಮಾಡುವುದಕ್ಕೆ ಸಾಧ್ಯ ಇದೆ.

ಶ್ರೀ ಎಂ.ಸಿ.ನಾಣಯ್ಯ: ಬ್ಯಾಕ್‌ವರ್ಡ್ ಕಮಿಷನ್ ಅಧ್ಯಕ್ಷರ ಜೊತೆಯಲ್ಲಿ ನಾನು ಮಾತನಾಡುತ್ತೇನೆ.

ಶ್ರೀ ಎಂ.ವೀರಪ್ಪಮೊಯಿಲಿ: I will also speak to him.

ಎ) ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ನಡೆದಿರಬಹುದಾದ ಅವ್ಯವಹಾರದ ಬಗ್ಗೆ ಸಿ.ಓ.ಡಿ ತನಿಖೆ ನಡೆಸುವುದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಅಧ್ಯಕ್ಷರೇ, ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯನ್ನು ವಿಸ್ತರಣೆ ಯೋಜನೆಗೆ ಕೈಗೆ ತೆಗೆದುಕೊಂಡು